**ಇಂದು ದಿನಾಂಕ : *06.02.2023* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಸಿ.ಎನ್. ವಕೀಲರಿಂದಃ</u>**

ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಕೊಡಗಿನಲ್ಲಿ ವಾಸವಿದ್ದೇನೆ. ನನ್ನ ವಿಳಾಸ ನಲ್ಲೂರು ಗ್ರಾಮ, ಕಿರಗೂರು ಪೋಸ್ಟ್, ಕೊಡಗು. ನಾನು ನಿ.ಪಿ.04 ರಲ್ಲಿ ತೋರಿಸಿರುವ ವಿಳಾಸದಲ್ಲಿ ವಾಸವಿರುವುದಿಲ್ಲ. ನಿ.ಪಿ.01 ರಿಂದ 16 ದಾಖಲೆಗಳಲ್ಲಿ ಇರುವ ಅಂಶಗಳು ಗೊತ್ತು. ಸ.ನಂ. 47 ರಲ್ಲಿ ಒಟ್ಟು 4 ಎಕರೆ ಜಮೀನಿದೆ. ಸದರಿ ಸ.ನಂಬರಿನಲ್ಲಿ 4 ಎಕರೆ ಬಿಟ್ಟು ಬೇರೆ ಜಮೀನು ಇಲ್ಲ. ಸದರಿ ಸ.ನಂಬರಿನಲ್ಲಿ ನಾನು 4 ಎಕರೆ ಜಮೀನನ್ನು ಮಾತ್ರ ಕ್ರಯಕ್ಕೆ ಪಡೆದಿದ್ದೇನೆ. ಅದರ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. ನಾನು ಜಮೀನಿನನ್ನು ಉಲ್ಲಾಸ್ ಕಾರಂತ್ ಬಿನ್ ಶಿವರಾಂ ಕಾರಂತ್ ರವರ ಕಡೆಯಿಂದ ಖರೀದಿ ಮಾಡಿರುತ್ತೇನೆ. ಉಲ್ಲಾಸ್ ರವರ ಹೆಸರಿನಲ್ಲಿ ಜಮೀನು ಇದ್ದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ನಾನು ಖರೀದಿ ಮಾಡಿದ ಜಮೀನು ಅಸ್ತಿತ್ವದಲ್ಲಿ ಇದೆ ಎಂದು ತೋರಿಸಲು ನನ್ನ ಕ್ರಯಪತ್ರ ಹಾಜರು ಪಡಿಸಿದ್ದೇನೆ. ಅದನ್ನು ಬಿಟ್ಟು ಬೇರೆ ದಾಖಲೆ ಹಾಜರು ಪಡಿಸಿಲ್ಲ. ನನ್ನ ಕ್ರಯಪತ್ರದಲ್ಲಿ ಸ.ನಂ.47 ರ 4 ಎಕರೆ ಜಮೀನಿಗೆ ಪ್ರತ್ಯೇಕ ಚೆಕ್ಕುಬಂದಿ ಕೊಟ್ಟಿಲ್ಲ. ಸಾಕ್ಷಿ ಒಟ್ಟು ಜಮೀನಿಗೆ ಚೆಕ್ಕು ಬಂದಿ ನಮೂದು ಇದೆ ಎಂದು ನುಡಿಯುತ್ತಾರೆ. ನಮ್ಮ ಕ್ರಯಪತ್ರದಲ್ಲಿ ಸದರಿ 4 ಎಕರೆ ಜಮೀನಿಗೆ ಪ್ರತ್ಯೇಕ ಚೆಕ್ಕುಬಂದಿ ಕೊಡಲು ತೊಂದರೆ ಇತ್ತು. ಸಾಕ್ಷಿ 11 ಸ.ನಂಬರ್ ಜಮೀನುಗಳು ಇದ್ದ ಕಾರಣ ಪ್ರತ್ಯೇಕ ಚೆಕ್ಕುಬಂದಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿ ಎಲ್ಲಿ ವಾಸವಿದ್ದಾರೆ ಗೊತ್ತಿಲ್ಲ. ಆಕೆಯ ಗಂಡನ ಹೆಸರು ಮತ್ತು ಆಕೆಯ ಮಾವನ ಹೆಸರು ಗೊತ್ತಿಲ್ಲ. ಆಕೆ ಸ್ವಾಧೀನದಲ್ಲಿರುವ ಜಮೀನಿನ ಸ.ನಂಬರು ಗೊತ್ತಿಲ್ಲ. ನಿ.ಪಿ.11 ಸರ್ವೇ ಮಾಡಿ ಪಕ್ಕಾ ಪೋಡು ಮಾಡಿ ಕೊಟ್ಟಿರುವ ದಾಖಲೆಯಾಗಿರುತ್ತದೆ. ನಿ.ಪಿ.11 ನಾನು ಜಮೀನು ಖರೀದಿ ಮಾಡಿದ ನಂತರ ಮಾಡಿರುವ ದಾಖಲೆಯಾಗಿರುತ್ತದೆ. ಸದರಿ ದಾಖಲೆ ನನಗೆ ಸಂಬಂಧ ಪಟ್ಟ ದಾಖಲೆಯಾಗಿರುತ್ತದೆ.

ನಿ.ಪಿ.11 ರಲ್ಲಿ ನನ್ನ ಮತ್ತು ನನ್ನ ತಂದೆ ಹೆಸರು ಇಲ್ಲ ಎಂದರೆ ಸರಿ. ನಿ.ಪಿ.11 ರಲ್ಲಿ ದಿಃ 30.09.1980 ಎಂದು ನಮೂದು ಇದೆ ಎಂದರೆ ಸರಿ. ನಾನು 1980 ನೇ ಸಾಲಿನಲ್ಲಿ ಜಮೀನು ಖರೀದಿ ಮಾಡಿರಲಿಲ್ಲ. ನಿ.ಪಿ.11 ಸ.ನಂ. 46 ಕ್ಕೆ ಸಂಬಂಧ ಪಟ್ಟದ್ದಾಗಿರುತ್ತದೆ. ನಿ.ಪಿ.05 ಸ.ನಂ.47 ಮತ್ತು ಅದರ ಜೊತೆ ಉಳಿದ 10 ಸ.ನಂಬರುಗಳಿಗೆ ಸೇರಿದ್ದಾಗಿರುತ್ತದೆ. ನಿ.ಪಿ.05 ರಲ್ಲಿ ಅಷ್ಟು ಜಮೀನುಗಳನ್ನು ಬಿಟ್ಟು ಬೇರೆ ಜಮೀನುಗಳು ಇರುವುದಿಲ್ಲ. ನಿ.ಪಿ.05 ನಾನು ಜಮೀನು ಕ್ರಯಕ್ಕೆ ಬರೆಯುವ ಪೂರ್ವದ ದಾಖಲೆಯಾಗಿರುತ್ತದೆ.

**ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***

**ಪಿರಿಯಾಪಟ್ಟಣ**